ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

ಸಿ.ಸಿ.ನಂ.**1129/2023.**

ದಿನಾಂಕಃ**14-07-2026** ರಂದು ಮಧ್ಯಾಹ್ನ **3.00** ಗಂಟೆಗೆ ಸಾಕ್ಷಿಯು **video conference** ಮೂಲಕ ಹಾಜರಾಗಿದ್ದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | ಶಿವಕುಮಾರ್ | ಚಾಸಾ -19<br>ಪ್ರಾಸಾ -8 |
| ತಂದೆಯ ಹೆಸರು | ರೇವಣಸಿದ್ದಪ್ಪ | |
| ವಯಸ್ಸು (ವರ್ಷಗಳಲ್ಲಿ) | 44 | |
| ಉದ್ಯೋಗ | ಪಿ ಐ | |
| ವಾಸ | ಉಡುಪಿ | |

ಮಾನ್ಯ ಸ.ಸ.ಅ.ರವರು ಹಾಗೂ ಆರೋಪಿ ಪರ ವಕೀಲರು ಸಹಃ **video conference** ಮೂಲಕ ತೆರೆದ ನ್ಯಾಯಾಲಯದಲ್ಲಿಯೇ ಇದ್ದು ಹಾಜರಾಗಿರುತ್ತಾರೆ.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು 20.05.2022 ರಿಂದ 31.12.2023 ರ ವರೆಗೂ ಕಡೂರು ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ17.09.2022 ರಂದು ಈ ಕೇಸಿನ ಕಡತವನ್ನು ಚಾಸಾ 18 ರವರಿಂದ ಪಡೆದುಕೊಂಡು ಪರಿಶೀಲನೆ ಮಾಡಿ, ತನಿಖೆ ಮುಂದುವರೆಸಿರುತ್ತೇನೆ.

ನಂತರ, ಅದೇ ದಿನ ಚಾಸಾ 18 ರವರಿಂದ ಶವ ಪಂಚನಾಮೆ ವರದಿ ಪಡೆದಿರುತ್ತೇನೆ. ಅದನ್ನು ನಿಪಿ 10 ಎಂದು ಸಾಕ್ಷಿಯ ಸಹಿಯನ್ನು ನಿಪಿ10 ಎ ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ 13 ರವರ ಮೂಲಕ ಮೃತನ ರಕ್ತದ ಮಾದರಿ ತೆಗೆದು ಮಹಜರ್ ಮಾಡಿ ಆರ್ ಎಫ್ ಎಸ್ ಎಲ್ ವರದಿ ನೀಡುವಂತೆ ರಕ್ತದ ಮಾದರಿ ಕಳುಹಿಸಿರುತ್ತೇನೆ. ಸದರಿ ಮಹಜರ್ ಅನ್ನು ನಿಪಿ 11 ಎಂದು ಸಾಕ್ಷಿಯ ಸಹಿಯನ್ನು ನಿಪಿ11 ಎ ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ 4 ರವರು ತೋರಿಸಿದ ಸ್ಥಳದಲ್ಲಿ ಚಾಸಾ 2, 3 ರವರ ಸಮಕ್ಷಮ ಮ.12.30 ರಿಂದ 1.30 ರ ವರೆಗೂ ನಿಪಿ 3 ರಂತೆ ಸ್ಥಳ ಪಂಚನಾಮೆ ಜರುಗಿಸಿರುತ್ತೇನೆ, ಸಾಕ್ಷಿಯ ಸಹಿಯನ್ನು ನಿಪಿ3 ಡಿ ಎಂದು ಗುರುತಿಸಲಾಯಿತು. ಸದರಿ ವೇಳೆ ನಿಪಿ 4 ರಂತೆ ಪೋಟೋ ತೆಗೆದಿರುತ್ತೇನೆ.

ಅದೇ ದಿನ ಕಡೂರು ಠಾಣಾ ಆವರಣದಲ್ಲಿ ಲಾರಿ ಮತ್ತು ಬೈಕ್ ಚಾಸಾ 2 ರಿಂದ 4 ರವರ ಸಮಕ್ಷಮ ಮ.1.45 ರಿಂದ 2.15 ರ ವರೆಗೂ ನಿಪಿ 5 ರಂತೆ ಅಮಾನತ್ತು ಪಂಚನಾಮೆ ಜರುಗಿಸಿರುತ್ತೇನೆ, ಆ ವೇಳೆ ನಿಪಿ 6 ರಂತೆ ಪೋಟೋ ತೆಗೆಯಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ5 ಡಿ ಎಂದು ಗುರುತಿಸಲಾಯಿತು.

ಚಾಸಾ 12 ರವರಿಗೆ ಕಲಂ 133 ರಡಿ ನೋಟೀಸು ನೀಡಿ ಉತ್ತರ ಪಡೆಯಲಾಗಿದೆ. ಅದನ್ನು ನಿಪಿ 12, 13 ಎಂದು ಸಾಕ್ಷಿಯ ಸಹಿಯನ್ನು ನಿಪಿ12 ಎ, 13 ಎ ಎಂದು ಗುರುತಿಸಲಾಯಿತು.

ವಾಹನವನ್ನು(ಲಾರಿ) ಮಾಲೀಕರಿಂದ ಬಾಂಡ್ ಪಡೆದು ಬಿಡುಗಡೆ ಮಾಡಿರುತ್ತೇನೆ.

ಬಾಂಡ್ ನಿಪಿ 14 ಎಂದು ಸಾಕ್ಷಿಯ ಸಹಿಯನ್ನು ನಿಪಿ14 ಎ ಎಂದು ಗುರುತಿಸಲಾಯಿತು.

ದಿಃ26.09.2022 ರಂದು ರಕ್ತದ ಮಾದರಿ ಕಳುಹಿಸಿದ ಬಗ್ಗೆ ಸ್ವೀಕೃತಿ ಪಡೆದಿರುತ್ತೇನೆ, ಅದನ್ನು ನಿಪಿ 15 ಎಂದು ಸಾಕ್ಷಿಯ ಸಹಿಯನ್ನು ನಿಪಿ15 ಎ ಎಂದು ಗುರುತಿಸಲಾಯಿತು.

ದಿಃ29.12.2022 ರಂದು ಆರ್ ಎಫ್ ಎಸ್ ಎಲ್ ರವರಿಂದ ವರದಿ ಪಡೆದಿರುತ್ತೇನೆ. ಅದನ್ನು ನಿಪಿ 16 ಎಂದು ಸಾಕ್ಷಿಯ ಸಹಿಯನ್ನು ನಿಪಿ16 ಎ ಎಂದು ಗುರುತಿಸಲಾಯಿತು.

ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗೆಂದು ಚಾಸಾ 20 ರವರಿಗೆ ವರ್ಗಾಹಿಸಿರುತ್ತೇನೆ.

<u>ಪಾಟೀಸವಾಲುಃ ಆರೋಪಿ ಪರ ಶ್ರೀ. ಸಿ ಬಿ ವಕೀಲರಿಂದಃ</u>

ಕಂಸಗಾರ ಗೇಟ್ ಬಳಿ ಪ್ರಯಾಣಿಕಾರ ತಂಗುದಾಣವಿದೆ ಎಂದರೆ ಸರಿ. ಸದರಿ ತಂಗುದಾಣಕ್ಕೆ ವಿದ್ಯುತ್ ಸಂಪರ್ಕವಿದೆ ಎಂದರೆ ಸರಿ. ಅದರ ಮುಂದೆ ರಸ್ತೆ ಬದಿಯಲ್ಲಿ ಲಾರಿ ನಿಂತಿತ್ತು ಎಂದರೆ ಸರಿ. ತನಿಖಾ ಕಾಲಕ್ಕೆ ಬೈಕಿನಲ್ಲಿ ಮೂರು ಜನ ಹೋಗುತ್ತಿದ್ದರು ಎಂದು ತಿಳಿದುಬಂದಿರುತ್ತದೆ, ಹೆಸರು ದೂರಿನಲ್ಲಿ ಇದೆ. ರಸ್ತೆಯು ಸು.50 ಅಡಿ ಅಗಲವಿದೆ. ಸಾಕ್ಷಿ ಮುಂದುವರೆದು 35 ಅಡಿ ಟಾರು ರಸ್ತೆ ಇದೆ ಎರಡೂ ಕಡೆ ಸು.10 ಅಡಿ ಪಾದಚಾರಿ ರಸ್ತೆ ಇದೆ. ಪುಡಿಪುಡಿಯಾದ ಹೆಲ್ಮೇಟ್ ಅನ್ನು ಪಿ ಎಫ್ ಮಾಡಿಲ್ಲ.

ಮೃತ ಗಿರೀಶ್ ನ ಕುಟುಂಬದ ಅಪಘಾತದ ಪರಿಹಾರ ಕೊಡಿಸಬೇಕೆಂದು ವಿಮೆ ಮತ್ತು ಡಿ ಎಲ್ ಹೊಂದಿದ್ದ ಲಾರಿಯ ಚಾಲಕನಾದ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ಸಿಲುಕಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೂ ಈ ಕೇಸಿಗೂ ಸಂಬಂಧವಿಲ್ಲದಿದ್ದರು ಸಹಃ ಮೃತರ ಕುಟುಂಬಕ್ಕೆ ಸಹಾಯವಾಗಲೆಂದು ಸುಳ್ಳು ತನಿಖೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತವಾಗಿಲ್ಲ ಹಾಗೂ ಒಂದೇ ಬೈಕಿನಲ್ಲಿ 3 ಜನ ಬಂದು ಅವರೇ ಅಪಘಾತ ಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ಹೋಗಿ ಸ್ಥಳ ಮಹಜರ್ ಮಾಡದೇ ಠಾಣೆಯಲ್ಲಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆ ಪಡೆಯದೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಃದಃನ್ಯಾಃದಂ.,ರವರು, ಕಡೂರು.